ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಾಗಪುರ ಉಪವಿಭಾಗ

ದಿನಾಂಕ: 17/10/2020

***ವಾರ್ಡ್-67ರ ವಾರ್ಡ್ ಸಭೆಯ ನಡವಳಿಗಳು***

ಮಹಾಲಕ್ಷ್ಮೀ ವಿಧಾನ ಸಭಾ ಕ್ಷೇತ್ರದ ನಾಗಪುರ ವಾರ್ಡ್-67 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಸನ್ಮಾನ್ಯ ಶ್ರೀ ವಿಶ್ವನಾಥ್ ಮುಖ್ಯ ಅಭಿಯಂತರರು, ನೋಡಲ್ ಅಧಿಕಾರಿ ಹಾಗು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೆರೆಗೆ ದಿನಾಂಕ 17/10/2020 ರಂದು ಶನಿವಾರ ಬೆಳ್ಳಿಗೆ 10.30 ಕ್ಕೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ವಿಶ್ವನಾಥ್ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನೆಡೆಸಲಾಯಿತು.

**ಸಭೆಗೆ ಹಾಜರಿದ್ದವರು**

೧. ಶ್ರೀ ವಿಶ್ವನಾಥ್ ನೋಡಲ್ ಅಧಿಕಾರಿ ಹಾಗು ವಾರ್ಡ್ ಸಮಿತಿ ಅಧ್ಯಕ್ಷರ.

೨. ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು ಹಾಗು ಸಮಿತಿ ಕಾರ್ಯದರ್ಶಿಗಳು.

**ವಾರ್ಡ ಸಮಿತಿ ಸದಸ್ಯರುಗಳು**

1. ಶ್ರೀ ಎನ್ ಮಂಜುನಾಥ್ ,ತೋಟಗಾರಿಕೆ ಇಲಾಕೆ
2. ಶ್ರೀ ಬಿ.ಹೆಚ್ ಸುಬ್ರಹ್ಮಣಿ, ಕಂದಾಯ ಇಲಾಖೆ
3. ಶ್ರೀ ಕೃಷ್ಣ ಮೂರ್ತಿ, SI ಸುಬ್ರಮ್ಮಣ್ಯನಗರ ಪೋಲಿಸ್ ಠಾಣೆ.
4. ಶ್ರೀ ಸುನಿಲ್, ಮಾರ್ಶಲ್ ,ನಾಗಪುರ
5. ಶ್ರೀ ಕೆ.ವಿ ಲೋಕೇಶ್, ಬೀದಿ ನಾಯಿಗಳ ನಿರ್ವಹಣೆ
6. ಶ್ರೀ ಶ್ರೀನಿವಾಸ್ ಗೌಡ, ಗುತ್ತಿಗೆದಾರರು SWM
7. ಶ್ರೀ ವಿ ಗೋಪಾಲಕೃಷ್ಣ .ವಿ, ರಾಜಾಜಿನಗರ ಸಂಚಾರಿ ಠಾಣೆ

10 .ಶ್ರೀ ಸಿ. ಮಂಜು ರಾಜಾಜಿನಗರ ಸಂಚಾರಿ ಠಾಣೆ

11 .ಶ್ರೀ ಶ್ರೀನಿವಾಸ್ ಗೌಡ, ASI ರಾಜಾಜಿನಗರ ಸಂಚಾರಿ ಠಾಣೆ

12 .ಶ್ರೀ ಎಂ.ಆರ್. ಕೆಂಪರಾಜು JE BWSSB (Borewell)

13 ಶ್ರೀ ಆರ್ ಶಿವರಾಮ, ಅರಣ್ಯ ಇಲಾಖೆ

14 .ಶ್ರೀ ಕೆ. ಗಂಗಚಲುವಯ್ಯ, BWSSB

15 .ಶ್ರೀ ಬೈರಪ್ಪ ,ASI ಮಹಾಲಕ್ಷ್ಮೀಪುರ ಠಾಣೆ

16 .ಶ್ರೀ ಎಂ. ಛಾಯಾಪತಿ.

1) **ಕೋವಿಡ್-೧೯ ಸಾಂಕ್ರಾಮಿಕ ರೋಗದ ಬಗ್ಗೆ**

- ಕೋವಿಡ್-೧೯ ಸಾಂಕ್ರಾಮಿಕ ಸೋಂಕು ಹರಡುವುದನ್ನು ತಡೆಗಟ್ಟಲು ಮಾಸ್ಕ್‌ನ್ನು ಕಡ್ಡಾಯವಾಗಿ ಹಾಕಲು ಸಾರ್ವಜನಿಕರಿಗೆ ಜಾಗೃತಿ ಮುಡಿಸುವುದು ಹಾಗೂ ನಾಗಪುರ ವಾರ್ಡ್‌ರಲ್ಲಿ ಕೋವಿಡ್ ಕೇಸ್‌ಗಳು ಹೆಚ್ಚಾಗುತ್ತಿರುವುದರಿಂದ Primary ಮತ್ತು Secondary Contacts ಗಳ ಪಟ್ಟಿಯನ್ನು ಪಡೆಯಲು ಸೂಚಿಸಿದೆ.

Scanned by CamScanner

ವಾರ್ಡ್ ವ್ಯಾಪ್ತಿಯಲ್ಲಿರುವ ಕೋವಿಡ್ ಸೋಂಕಿತರು ಮೆಡಿಕಲ್ ಕಿಟ್‌ಗಳನ್ನು ಬೇಡಿಕೆಯಿಟ್ಟಿದ್ದು ಅದರ ಬಗ್ಗೆ ಗಮನ ಹರಿಸಲು ಆರೋಗ್ಯ ಇಲಾಖೆಗೆ ಸೂಚಿಸಿದರು.

- ಮಾರ್ಷಲ್‌ಗಳಿಗೆ ಮಾಸ್ಕ್ ಹಾಕದೆ ಇರುವವರಿಗೆ ಕಡ್ಡಾಯವಾಗಿ ದಂಡ ಹಾಕಲು ಸೂಚಿಸಿದರು.

2) **ತೋಟಗಾರಿಕೆ ಇಲಾಖೆ**

ಪಾರ್ಕ್‌ಗಳಲ್ಲಿರುವ ಮಣ್ಣು ಮತ್ತು ಕಸವನ್ನು ತೆಗೆಯಲು ಸೂಚಿಸಿದರು ಮತ್ತು ಸಿದ್ದಾರೂಢ ಉದ್ಯಾನದಲ್ಲಿ ಪಾರ್ಕ್‌ನಲ್ಲಿ ಶೌಚಾಲಯದಲ್ಲಿರುವ ಪೈಪ್ ಮತ್ತು Water Level Controller ಕಿತ್ತು ಹಾಕಿರುವ ದೂರಿನ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.

3) **ಬೆಂಗಳೂರು ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿ**

ವಾರ್ಡ67 ನಾಗಪುರದಲ್ಲಿ ಪೈಪ್‌ಲೈನ್ ದುರಸ್ತಿಯಲ್ಲಿ ಅಗೆದಿರುವ ಗುಂಡಿಗಳನ್ನು ಸರಿಯಾಗಿ ಮುಚ್ಚುಲು ಕ್ರಮ ವಹಿಸಲು ತಿಳಿಸಿದರು ಹಾಗು ಭೋವಿಪಾಳ್ಯಾ 12ನೇ ಕ್ರಾಸ್‌ನಲ್ಲಿ ಅಗೆದಿರುವ ಗುಂಡಿ ಸಮಸ್ಯೆಯನ್ನು ಕೂಡಲೆ ಕ್ರಮ ತೆಗೆದುಕೊಳಲು ಸೂಚಿಸಿದರು.

4) **ಸಂಚಾರಿ ಪೋಲಿಸ್ ಇಲಾಖೆ**

ಬಿಬಿಎಂಪಿ ~~ಮಾರ್ಷಲ್~~ ರಸ್ತೆಗಳಲ್ಲಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಸೂಚಿಸಿದರು, Abandoned Vehicleಗಳ ಬಗ್ಗೆ ಮಾಹಿತಿ ಕಲೆ ಹಾಕಿ ಅವರಿಗೆ ನೋಟಿಸ್ ನೀಡಲು ನೋಡಲ್ ಅಧಿಕಾರಿಗಳು ಸೂಚಿಸಿದರು

ಪಂಚಮುಖಿ ದೇವಸ್ಥಾನದ ಹತ್ತಿರ ರಸ್ತೆಗೆ ಲೈನ್ ಮಾರ್ಕಿಂಗ್ ಇಲ್ಲದ ಕಾರಣ ಲೈನ್ ಮಾರ್ಕಿಂಗ್ ಮಾಡಲು Traffic Engineering cell ಅಭಿಯಂತರರಿಗೆ ದೂರವಾಣಿ ಮುಖೇನ ಕರೆ ಮಾಡಿ ಅವರಿಗೆ ಲೇನ್ ಮಾರ್ಕಿಂಗ್ ಮಾಡಲು ಸೂಚಿಸಿದರು.

5) **ಘನತ್ಯಾಜ್ಯ ನಿರ್ವಹಣೆ**

ಪೌರಕಾರ್ಮಿಕರು ಕೈಗವಸುಗಳನ್ನು ಹಾಕದೆ ಇರುವುದನ್ನು ನೋಡಲ್ ಅಧಿಕಾರಿಗಳು ನೋಡಿದ್ದು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು SWM ಪರೀವಿಕ್ಷಕರಿಗೆ ತಿಳಿಸಿದರು.

6) **ಪೋಲಿಸ್ ಇಲಾಖೆ**

ಭೊವಿಪಾಳ್ಯ 12ನೇ ಕ್ರಾಸ್‌ನಲ್ಲಿ ಕಾರ್‌ಗಳನ್ನು ಖಾಲಿ ಜಾಗಗಳಲ್ಲಿ ನಿಲ್ಲಿಸಿದ್ದು ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದು ಅದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳಲು ಪೋಲಿಸ್ ಇಲಾಖೆಗೆ ಸೂಚಿಸಿದರು

ವಾರ್ಡ67 ನಾಗಪುರದಲ್ಲಿ Yellow Board ವಾಹನಗಳು ಎಲ್ಲೆಂದರಲ್ಲಿ ನಿಲುಗಡೆ ಮಾಡಿದ್ದು ಅದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳಲು ಪೋಲಿಸ್ ಇಲಾಖೆಗೆ ಸೂಚಿಸಿದರು.

7) **ಕಾಮಗಾರಿ ಇಲಾಖೆ**

14ನೇ ಕ್ರಾಸ್‌ನಲ್ಲಿ ಹೊಸದಾಗಿ ಡ್ರೈನ್ ನಿರ್ಮಾಣ ಮಾಡುತ್ತಿದ್ದು ಅದಕ್ಕೆ ಗ್ರೇಡಿಯಂಟ್ ಸರಿಯಾಗಿ ಕೊಡಲು ಸೂಚಿಸಿದರು ಮತ್ತು ರಸ್ತೆಗಳಲ್ಲಿ ಆಗುತ್ತಿರುವ ಗುಂಡಿಗಳನ್ನು ವೇಗವಾಗಿ ಮುಚ್ಚಲು ತಿಳಿಸಿದರು.

Scanned by CamScanner

8) **ಪಶು ಸಂಗೋಪನೆ ಇಲಾಖೆ**

ವಾರ್ಡ್–67 ರಲ್ಲಿ ಶ್ವಾನಗಳು ಜಾಸ್ತಿಯಾಗಿದ್ದು ಸೂಕ್ತ ಕ್ರಮವಹಿಸಲು ತಿಳಿಸಿದರು.

9) **ಅರಣ್ಯ ಇಲಾಖೆ**

ಮರಗಳಿಂದ ಬೀಳುತ್ತಿರುವ ಕಾಯಿಗಳ ಬಗ್ಗೆ ದೂರುಗಳಿದ್ದು ಕೂಡಲೆ ಕಾಯಿಗಳನ್ನು ಕಿತ್ತುಹಾಕಲು ಸೂಚಿಸಿದರು ಮತ್ತು ಕೆ.ಇ.ಬಿ ಲೈನ್‌ಗಳ ಹತ್ತಿರ ಮರಗಳನ್ನು ಸರಿಯಾಗಿ Trimming ಮಾಡಲು ಸೂಚಿಸಿದರು, ರಾಜಾಜಿನಗರ ಮೆಟ್ರೋ ನಿಲ್ದಾಣದ ಹತ್ತಿರ ಕಡಿದು ಹಾಕ್ಕಿದ ಮರಗಳನ್ನು ತೆರವುಗೋಳಿಸಲು ಸೂಚಿಸಿದರು.

10) **ಮಾರ್ಷಲ್**

ಮಾಸ್ಕ್ ಹಾಕದೆ ಇರುವವರಿಗೆ ಕಡ್ಡಾಯವಾಗಿ ದಂಡ ಹಾಕಲು ಸೂಚಿಸಿದರು ಮತ್ತು ರಸ್ತೆಯಲ್ಲಿ ಡೆಬ್ರಿಸ್ ಹಾಕಿದವರ ವಿರುದ್ಧ ಕ್ರಮ ತೆಗೆದುಕೊಂಡು ದಂಡ ಹಾಕಲು ಸೂಚಿಸಿದರು.

Ravi

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

17/10/2020

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner